**ಸಾಕ್ಷಿಗೆ ದಿನಾಂಕಃ 9.6.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃಃ**

ಚಾಸಾ-4 ನಮ್ಮ ಊರಿನವರು ಮತ್ತು ಚಾಸಾ-4 ನನ್ನ ತಮ್ಮನ ಹೆಂಡತಿಯಾಗಿರುವುದಿಲ್ಲ. ಚಾಸಾ-4 ನನ್ನ ತಮ್ಮ ಹೆಂಡತಿಯಾಗಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-5 ನನ್ನ ಮಾವ ಎಂದರೆ ಸರಿಯಲ್ಲ. ಚಾಸಾ-5 ನನ್ನ ಮಾವ ಆಗಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-6 ನನ್ನ ಗಂಡನ ತಮ್ಮ ಎಂದರೆ ಸರಿಯಲ್ಲ. ಚಾಸಾ-7 ನನ್ನ ಗಂಡನ ತಂಗಿಯ ಮಗ ಎಂದರೆ ಸರಿಯಲ್ಲ. ಚಾಸಾ-8 ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಆರೋಪಿತರ ನಡುವೆ ಜಮೀನಿನ ವಿಚಾರವಾಗಿ ಜಗಳವಾಗಿರುವುದಿಲ್ಲ.

ನಾನು ನನ್ನ ಮದುವೆಯಾಗಿ 16 ವರ್ಷವಾಗಿದೆ. ನನ್ನ ಮದುವೆಯಾಗಿನಿಂದಲೂ ನಾನು ನನ್ನ ಗಂಡನ ಮನೆಯಲ್ಲಿ ವಾಸವಿದ್ದೇನೆ. ನಮ್ಮ ಜಮೀನಿನ ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ತನಿಖಾ ಸಂದರ್ಭದಲ್ಲಿ ನೀಡಿದ್ದೆವು. ಗಲಾಟೆಯಾದ ಸಂದರ್ಭದಲ್ಲಿ ನಾನು ಚಿಕ್ಕಮ್ಮನ ಮನೆಯಿಂದ ನನ್ನ ಮಗನನ್ನು ಕರೆದುಕೊಂಡು ಬರುತ್ತಿದ್ದೆ. ನನ್ನ ಚಿಕ್ಕಮ್ಮನ ಮನೆಯಲ್ಲಿ ನನ್ನ ಮಗ ಮತ್ತು ಚಿಕ್ಕಮ್ಮ ಇದ್ದರು. ನನ್ನ ಮಗ ನನ್ನ ಚಿಕ್ಕಮನ ಮನೆಗೆ ಬೆಳಗ್ಗೆ ಸುಮಾರು 9 ಗಂಟೆಗೆ ಹೋಗಿದ್ದನು. ನನ್ನ ಚಿಕ್ಕಮ್ಮನ ಮನೆ ನಮ್ಮ ಮನೆಯ ಹಿಂದಿನ ಬೀದಿಯಲ್ಲಿದೆ. ಸದರಿ ಬೀದಿಯಲ್ಲಿ ಅನೇಕ ಮನೆಗಳು ಇವೆ. ಆರೋಪಿತರ ಮನೆ ನನ್ನ ಚಿಕ್ಕಮ್ಮನ ಮನೆಯೊಂದಿಗೆ ವಿಭಾಗವಾಗಿರುತ್ತದೆ. ನನ್ನ ಮಗನನ್ನು ನನ್ನ ಚಿಕ್ಕಮ್ಮನ ಮನೆಯಿಂದ ಕರೆದುಕೊಂಡು ಬರುವ ಸಂದರ್ಭದಲ್ಲಿ ಆರೋಪಿತರು ನಮ್ಮ ಮನೆಯ ಎದುರುಗಡೆ ನಿಂತಿದ್ದರು. ಆರೋಪಿತರು ನನ್ನ ಜೊತೆ ಜಮೀನಿನ ವಿಚಾರವಾಗಿ ಎಂದಿಗೂ ಸಹ ಗಲಾಟೆ ಮಾಡಿರುವುದಿಲ್ಲ. ನನ್ನ ಮೇಲೆ ಆರೋಪಿತರು ಹಲ್ಲೆ ಮಾಡಿದ್ದನ್ನು ನಮ್ಮ ಅಕ್ಕಪಕ್ಕದ ಮನೆಯವರು ನೋಡಿರುತ್ತಾರೆ. ನನ್ನ ಚಿಕ್ಕಮ್ಮನೂ ಸಹ ನನ್ನ ಮೇಲೆಯಾದ ಹಲ್ಲೆಯನ್ನು ನೋಡಿರುತ್ತಾರೆ. ನನ್ನ ಮೇಲೆ ಹಲ್ಲೆ ನಡೆಯುವಾಗ ಚಾಸಾ-2 ರಿಂದ 4 ಅಲ್ಲಿಯೇ ಇದ್ದರು. ಸದರಿ ಗಲಾಟೆ ಸುಮಾರು ಒಂದು ಗಂಟೆ ಆಯಿತು. ನನ್ನನ್ನು ಆಸ್ಪತ್ರೆಗೆ ನನ್ನ ಗಂಡ ಕರೆದುಕೊಂಡು ಹೋದರು. ಘಟನೆ ನಡೆದ ಸ್ಥಳದಿಂದ ಆಸ್ಪತ್ರೆ ಸುಮಾರು 5-6 ಕಿ ಮೀ ದೂರದಲ್ಲಿದೆ. ಆಸ್ಪತ್ರೆಯಲ್ಲಿ ವೈದ್ಯರು ನನ್ನ ಕೆನ್ನೆಯ ಮೇಲೆಯಾದಂತಹ ಹಲ್ಲೆ ಮತ್ತು ಕೈಗೆ ಏಟಾಗಿದ್ದರ ಬಗ್ಗೆ ಚಿಕಿತ್ಸೆ ನೀಡಿದ್ದರು. ಪೊಲೀಸರು ಆಸ್ಪತ್ರೆಗೆ ಆ ದಿನ ಸುಮಾರು ಮಧ್ಯಾಹ್ನ 12 ಗಂಟೆ ಸುಮಾರಿಗೆ ಬಂದಿದ್ದರು. ನನಗೆ ಓದಲು ಬರುವುದಿಲ್ಲ. ನಾನು ನಿಪಿ-1 ರಲ್ಲಿರುವ ಅಂಶಗಳನ್ನು ಓದಿರುವುದಿಲ್ಲ. ನಾನು ಪೊಲೀಸರಿಗೆ ಕೃತ್ಯ ನಡೆದ

ಸ್ಥಳವನ್ನು ತೋರಿಸಿರುವುದಿಲ್ಲ. ನಾನು ಆಸ್ಪತ್ರೆಯಲ್ಲಿ ಆ ದಿನ ಮಧ್ಯಾಹ್ನನಿಂದ ಸಂಜೆಯವರಿಗೆ ಚಿಕಿತ್ಸೆ ಪಡೆದು ಮನೆಗೆ ಹೋಗಿದ್ದೆ. ಅದೇ ದಿನ ಮತ್ತೊಮ್ಮೆ ಸಂಜೆ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಾಗಿ ಮರುದಿನ ಬಿಡುಗಡೆಯಾಗಿ ಮನೆಗೆ ಹೋಗಿರುತ್ತೇನೆ. ನಾನು ದಿನಾಂಕಃ 8.9.2023 ರಂದು ಪೊಲೀಸ್ ಠಾಣೆಗೆ ನನ್ನ ಗಂಡ/ಚಾಸಾ-2 ಎಂಒ-1 ಮತ್ತು 2 ನ್ನು ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ನೀಡಿರುತ್ತೇವೆ. ಆ ಸಂದರ್ಭದಲ್ಲಿ ಚಾಸಾ-8 ಮತ್ತು 9 ರವರು ಠಾಣೆಯಲ್ಲಿ ಹಾಜರಿದ್ದರು. ಚಾಸಾ-9 ನನ್ನ ತಾಯಿಯಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿ ಎಂಒ-1 ಮತ್ತು 2 ನ್ನು ತೆಗೆದುಕೊಂಡು ಚಾಸಾ-8 ಮತ್ತು 9 ರವರ ಸಮಕ್ಷಮ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-4 ರಂತೆ ನ್ಯಾಯಾಲಯದಲ್ಲಿ ಪೊಲೀಸರು ಹೇಳಿಕೊಟ್ಟಂತೆ ಸುಳ್ಳು ಹೇಳಿಕೆಯನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಆರೋಪಿತರ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ನಾನು ನಮ್ಮ ಕುಟುಂಬದ ಸಂಬಂಧಿಕರೊಡನೆ ಶಾಮೀಲಾಗಿ ಆರೋಪಿತರು ಯಾವುದೇ ಗಲಾಟೆ ಮಾಡದೇ ಇದ್ದರೂ ಸಹ ಈ ಸುಳ್ಳು ಪ್ರಕರಣವನ್ನು ಆರೋಪಿತರ ವಿರುದ್ಧ ಸೃಷ್ಟಿಸಿರುತ್ತೇನೆಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಚಿಕಿತ್ಸೆಗೆ ಹೋದಾಗ ನನ್ನ ಮೇಲೆ ಆರೋಪಿತರು ಹಲ್ಲೆ ಮಾಡಿರುತ್ತಾರೆ ಎಂದು ವೈದ್ಯಾಧಿಕಾರಿಗಳ ಮುಂದೆ ಹೇಳಿರುತ್ತೇನೆ. ನಾನು ಆಸ್ಪತ್ರೆಯಲ್ಲಿ ನಿಪಿ-1 ರಂತೆ ಸುಳ್ಳು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ದೂರಿನಲ್ಲಿ ಹೇಳಿರುವಂತೆ ಯಾವುದೇ ಕೃತ್ಯ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಓ

Sd/-
ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ